# ಗೋಪಿಕಾ ಕನ್ನಡಾಭಿಮಾನ

‘ಕನ್ನಡ ಜನರ ಸಿನಿಮಾ ಅಭಿಮಾನ ಕನ್ನಡ ಸಿನಿಮಾರಂಗದಲ್ಲಿ ಎದ್ದುಕಾಣುತ್ತದೆ. ಪುನೀತ್ ರಾಜ್‌ಕುಮಾರ್ ಅವರಂಥವರನ್ನು ಜನರು ಎಂದಿಗೂ ನೆನಪಿನಲ್ಲಿಟ್ಟುಕೊಳ್ಳುತ್ತಾರೆ’ ಎಂದಿರುವ ಮಲಯಾಳಂ ಚೆಲುವೆ ಗೋಪಿಕಾ ಸುರೇಶ್, ‘ಆಲ್ಫಾ’ ಸಿನಿಮಾ ಮೂಲಕ ಕನ್ನಡಕ್ಕೆ ಕಾಲಿಟ್ಟವರು.

ಮಲಯಾಳಂ ಸಿನಿಮಾರಂಗದಲ್ಲಿ ಛಾಪು ಮೂಡಿಸುತ್ತಿರುವ ನಟಿ ಗೋಪಿಕಾ ಸುರೇಶ್, ಈಚೆಗೆ ತೆರೆಕಂಡಿರುವ ‘ಆಲ್ಫಾ’ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿದ್ದಾರೆ. ಕಳೆದ ಫೆಬ್ರುವರಿಯಲ್ಲಿಯೇ ಗೋಪಿಕಾ ಈ ಸಿನಿಮಾಗಾಗಿ ಆಡಿಷನ್ ನೀಡಿದ್ದು, ಇದೀಗ ಕನ್ನಡದಲ್ಲಿ ಅವರ ಚೊಚ್ಚಲ ಸಿನಿಮಾ ತೆರೆಕಂಡಿದೆ.

ಈ ಸಿನಿಮಾ ಕುರಿತು ತಮ್ಮ ಅನುಭವವನ್ನು ಸಂದರ್ಶನವೊಂದರಲ್ಲಿ ಹಂಚಿಕೊಂಡಿರುವ ಗೋಪಿಕಾ, ಕನ್ನಡದ ಬಗ್ಗೆ ಅಭಿಮಾನದ ಮಾತುಗಳನ್ನಾಡಿದ್ದಾರೆ.

‘‘ಕೆಜಿಎಫ್’, ‘ಕಾಂತಾರ’, ‘ಸಪ್ತಸಾಗರದಾಚೆ ಎಲ್ಲೋ’ದಂಥ ಕನ್ನಡ ಸಿನಿಮಾಗಳು ಬಹಳ ಸದ್ದು ಮಾಡಿವೆ. ಈ ಸಿನಿಮಾ ನನ್ನ ಪಾಲಿಗೆ ಡ್ರೀಮ್ ಪ್ರಾಜೆಕ್ಟ್ ಆಗಿತ್ತು. ಅಚ್ಯುತ್ ಕುಮಾರ್ ಸೇರಿದಂತೆ ಹಲವು ಪ್ರತಿಭಾನ್ವಿತ ಕಲಾವಿದರೊಂದಿಗೆ ಕೆಲಸ ಮಾಡುವ ಅವಕಾಶ ದೊರೆಯಿತು. ಕನ್ನಡಿಗರು ಸಿನಿಮಾ ಮಾಧ್ಯಮವನ್ನು ಪ್ರೀತಿಸುತ್ತಾರೆ. ಮಲಯಾಳಿಗಳು ಕೂಡ. ಈ ಅಂಶವೇ ನಮ್ಮಲ್ಲಿನ ಸಾಮ್ಯತೆ ಎನಿಸುತ್ತದೆ. ಕಂಟೆಂಟ್ ಆಧಾರಿತ ಸಿನಿಮಾಗಳನ್ನು ಆದರಿಸುತ್ತಿರುವ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಖುಷಿ ನನಗೂ ಇದೆ’’ ಎಂದು ಉತ್ಸುಕರಾಗಿ ನುಡಿದಿದ್ದಾರೆ.

ಮೊದಮೊದಲು ಕನ್ನಡ ಸಿನಿಮಾಗೆ ಬರುವಾಗ ಕೊಂಚ ಗಾಬರಿಯಾಗಿತ್ತು ಎಂದು ಹೇಳಿಕೊಂಡಿರುವ ಅವರು, ಇಲ್ಲಿನ ಆತಿಥ್ಯಕ್ಕೆ ಮನಸೋತಿದ್ದಾರಂತೆ.

‘‘ಮೊದಲು ನರ್ವಸ್ ಆಗಿದ್ದೆ. ಆದರೆ ನನ್ನನ್ನು ಆರಾಮಾಗಿರುವಂತೆ ಚಿತ್ರತಂಡ ನೋಡಿಕೊಂಡಿತು. ‘ಮಲ್ಲು ಕುಟ್ಟಿ’ ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಇದು ನನಗೆ ಬಹಳ ಇಷ್ಟವಾಗುತ್ತಿತ್ತು’’ ಎಂದು ನಗುತ್ತಲೇ ಉತ್ತರಿಸಿದ್ದಾರೆ.

ಆಕಾಂಕ್ಷ ಪಾತ್ರದಲ್ಲಿ ಗೋಪಿಕಾ ಪರಿಚಿತರಾಗಿದ್ದು, ಮಹತ್ವಾಕಾಂಕ್ಷೆಯ ಆಧುನಿಕ ಮಹಿಳೆಯಾಗಿ ತೆರೆಮೇಲೆ ಕಾಣಿಸಿಕೊಂಡಿದ್ದಾರೆ. ■





# ಗಣೇಶ್ ಮೆಲುಕು

ಇತ್ತೀಚೆಗೆ ಸೆಟ್ಟೇರಿರುವ ‘ತಮ್ಮ ಸುಖಾಗಮನ ಬಯಸುವ’ ಚಿತ್ರದ ಮೂಲಕ 45ನೇ ಸಿನಿಮಾಗೆ ಕಾಲಿಟ್ಟಿರುವ ನಟ ಗಣೇಶ್, ಸಿನಿಮಾರಂಗದಲ್ಲಿ ಎರಡು ದಶಕ ಪೂರೈಸಿರುವ ಸಂತಸದಲ್ಲಿದ್ದಾರೆ. 19ನೇ ವಯಸ್ಸಿಗೆ ಬೆಂಗಳೂರಿಗೆ ಕಾಲಿಟ್ಟು ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡು ‘ಮುಂಗಾರು ಮಳೆ’ ಸಿನಿಮಾದಿಂದ ಗೋಲ್ಡನ್ ಸ್ಟಾರ್ ಪಟ್ಟ ಪಡೆದುಕೊಂಡಿದ್ದ ಗಣೇಶ್, ಸಿನಿರಂಗದ ಇಪ್ಪತ್ತು ವರ್ಷಗಳ ಸಿನಿಮಾನುಭವವನ್ನು ಈ ಸಮಯದಲ್ಲಿ ಮೆಲುಕು ಹಾಕಿದ್ದಾರೆ.

‘ಬೆಂಗಳೂರಿಗೆ ಬಂದಾಗ ನನಗೆ 19 ವರ್ಷ. 2006ರಲ್ಲಿ ‘ಮುಂಗಾರು ಮಳೆ’ ಆಗಿದ್ದು. ಅಲ್ಲಿಂದ 20 ವರ್ಷ ಕಳೆದಿದ್ದು ಗೊತ್ತೇ ಆಗಲಿಲ್ಲ. ಗೆಲುವಾಗಲಿ, ಸೋಲಾಗಲಿ, ಯಾವುದನ್ನೂ ತಲೆ ಮೇಲೆ ಹೊತ್ತುಕೊಂಡು ಹೋಗುವುದಿಲ್ಲ. ಎಲ್ಲವನ್ನೂ ಒಂದೇ ರೀತಿ ಸ್ವೀಕರಿಸುತ್ತೇನೆ. ಒಂದು ಸಿನಿಮಾವನ್ನು ಯಾರೂ ಸೂಪರ್ ಹಿಟ್ ಮಾಡಲು ಸಾಧ್ಯವಿಲ್ಲ. ಅದು ತಾನಾಗಿಯೇ ಆಗಬೇಕು. ಶ್ರಮವಷ್ಟೆ ನಮ್ಮದು ಎಂದು ನಂಬಿರುವೆ. ಈ 20 ವರ್ಷಗಳ ಪಯಣದಲ್ಲಿ ಸಾಕಷ್ಟು ನೆನಪುಗಳಿವೆ. ಇದು ಒಂದು ಹೆಜ್ಜೆಯಷ್ಟೆ. ಇಡಬೇಕಾದ ಹೆಜ್ಜೆಗಳು ಸಾಕಷ್ಟಿವೆ’ ಎಂದಿದ್ದಾರೆ.

ಪ್ರೇಕ್ಷಕರಿಂದ, ನಿರ್ದೇಶಕರಿಂದ ಹಾಗೂ ನಿರ್ಮಾಪಕರಿಂದ ಇಷ್ಟು ವರ್ಷಗಳಲ್ಲಿ ನಿರಂತರ ಬೆಂಬಲ, ಪ್ರೀತಿ ಸಿಕ್ಕಿದ್ದಕ್ಕೆ ಕೃತಜ್ಞತೆಯನ್ನೂ ವ್ಯಕ್ತಪಡಿಸಿದ್ದಾರೆ. ‘ತಮ್ಮ ಸುಖಾಗಮನ ಬಯಸುವ’ ಸಿನಿಮಾ, ಗಣೇಶ್ ಸಿನಿಮಾ ಜರ್ನಿಯ 20 ವರ್ಷಗಳ ಮುನ್ನೋಟದಂತಿದ್ದು, ಭಾವನೆ ಹಾಗೂ ಸಂಬಂಧಗಳನ್ನು ಅಡಿಪಾಯವಾಗಿಟ್ಟುಕೊಂಡ ಕಥೆಯಾಗಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ.

‘ತಮ್ಮ ಸುಖಾಗಮನ ಬಯಸುವ’ ಸಿನಿಮಾ ಕುರಿತು ಮಾತನಾಡಿರುವ ಗಣೇಶ್, ‘ಕೌಟುಂಬಿಕ ಹಿನ್ನೆಲೆಯ ಈ ಸಿನಿಮಾ ಪ್ರೇಕ್ಷಕರೊಂದಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ಅಂಶಗಳನ್ನು ಒಳಗೊಂಡಿದೆ. ಮನುಷ್ಯನ ಭಾವನೆಗಳನ್ನು ತುಂಬ ಚೆನ್ನಾಗಿ ಹಿಡಿದಿಡುವ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಒಂದು ಭಾವನಾತ್ಮಕ ಚಿತ್ರವನ್ನು ತಂದಿದ್ದಾರೆ. ನಗುವಿನಲ್ಲಿಯೇ ಅಳು ತರಿಸುವ ಸಿನಿಮಾ. ಹಾಸ್ಯಕ್ಕೂ ಸಾಕಷ್ಟು ಒತ್ತು ನೀಡಿದ್ದೇವೆ’ ಎನ್ನುತ್ತಾ, ಚಿತ್ರತಂಡ ಹಾಗೂ ಕಥೆಯೆಡೆಗಿನ ತಂಡದ ದೃಷ್ಟಿಕೋನದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ■